ಶ್ರೀ ಜಗದೀಶ್ ಶೆಟ್ಟರ್:- ಎಲ್ಲಾ ಗೊತ್ತಿದೆ.

ಅಧ್ಯಕ್ಷರು:- ಅವರು ಮಾತನಾಡಿ ಮುಗಿಸಲಿ.

ಶ್ರೀ ಕಾಗೋಡು ತಿಮ್ಮಪ್ಪ- ನೀವು ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡುವುದಕ್ಕೆ ಅಧಿಕಾರವಿದೆ. ನೀವು ಮಾಡಿ, ನಾನು ಬೇಡವೆಂದು ಹೇಳಲಿಲ್ಲ. ಯಾವೊಬ್ಬ ಸದಸ್ಯರೂ ಒಂದು ನಿರ್ದಿಷ್ಟವಾದ ವಿಚಾರವನ್ನು, ನಿರ್ದಿಷ್ಟವಾದ ರೀತಿಯಲ್ಲಿ ಪ್ರಸ್ತಾಪ ಮಾಡದಿರುವ ಕಾರಣ, ನೀವು ಪಾಯಿಂಟ್ ಆಫ್ ಆರ್ಡರ್ ರೈಡ್ ಮಾಡಿರುವುದು ವ್ಯಾಕ್ಯೂಂನಲ್ಲಿದೆ.

ಶ್ರೀ ಜಗದೀಶ್ ಶೆಟ್ಟರ್:- ನೋ. ಯಾವ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದರೆಂಬುದು ಎಲ್ಲರಿಗೂ ಗೊತ್ತಿದೆ. ಅಜೆಂಡಾ ಏನಿದೆ ಅದರ ಪ್ರಕಾರ ಹೋಗಲಿ. ಅಜೆಂಡಾ ಪ್ರಕಾರ ಎಲ್ಲಾ ಬಿಸಿನೆಸ್ ಸ್ಟಾರ್ಟ್ ಮಾಡಿ, ಎಲ್ಲಾ ಸರಿ ಹೋಗುತ್ತದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ವಿರೋಧ ಪಕ್ಷದ ನಾಯಕರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ದಯವಿಟ್ಟು ಸ್ವೀಕಾರ ಮಾಡಿ. ನಂತರ, ಸಂಸದೀಯ ವ್ಯವಹಾರ ಸಚಿವರು, ಮುಖ್ಯಮಂತ್ರಿಗಳು, ಇತರೆ ಮುಖಂಡರ ಜೊತೆಯಲ್ಲಿ ಮಾತನಾಡಿ, ನಮ್ಮನ್ನೂ ಕರೆಸಿ, ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ, ಚರ್ಚೆ ಮಾಡೋಣ, ಅದನ್ನು ಯಾವ ಫಾರ್ಮ್‌ನಲ್ಲಿ ಮಾಡಬೇಕೆಂದು ಚರ್ಚಿಸೋಣ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಸಿಂಧ್ಯಾರವರ ಸಲಹೆ, ಹಾಗೂ ನಮ್ಮ ಜಗದೀಶ್ ಶೆಟ್ಟರ್‌ರವರ ಸಲಹೆಯನ್ನು ನಾವು ಕೇಳಿದ್ದೇವೆ. ಕಳೆದ 15 ವರ್ಷಗಳಿಂದ ಯಾವ ರೀತಿ ಸದನವನ್ನು ನಡೆಸಿದ್ದಾರೆ, ಯಾವ ಯಾವ ವಿಚಾರವನ್ನು ಹೇಗೆ ಹೇಗೆ ತೆಗೆದುಕೊಂಡಿದ್ದಾರೆ ಎಂಬುದನ್ನು ನಾವು ನೋಡಿದ್ದೇವೆ. ಅವರ ಉಪದೇಶ ನಮಗೆ ಬೇಕಾಗಿಲ್ಲ. ಚುಚ್ಚೋ ಮಾತು, ಮತ್ತೊಂದು ಎಲ್ಲವನ್ನೂ ನಾವು ನೋಡಿದ್ದೇವೆ. ಯಾರ್ಯಾರಿಗೆ ಯಾವ ರೀತಿ ಹೆಬ್ಬಾವು ಬಂತು, ಏನೇನಾಯಿತು, ಏನೇನು ಲೂಟಿ ಬಂತು ಎಂಬುದನ್ನು ಸಿಎಂಸಿ ವಿಚಾರದಲ್ಲಿ ನಾವು ನೋಡಿದ್ದೇವೆ. ನಿನ್ನೆ ಒಂದು ಸಣ್ಣ ವಿಚಾರವನ್ನು, ಜನರಲ್ ಆಗಿ ರೊಟೀನ್ ಆಗಿ ನಡೆಯುತ್ತಿದ್ದ ಸಣ್ಣ ವಿಚಾರಕ್ಕೆ.....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದು ಸಣ್ಣ ವಿಚಾರವಲ್ಲ. ಈ ಮಾತನ್ನು ಹಿಂದೆ ತೆಗೆದುಕೊಳ್ಳಬೇಕು. ಇದು ಗಂಭೀರವಾದ ವಿಚಾರ. ಈ ರೀತಿಯಾಗಿ ಮಂತ್ರಿಗಳು ಹೇಳುತ್ತಾರೆಂದರೆ, ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು:- ಅವರು ಮಾತನಾಡುವವರೆಗೆ ಸುಮ್ಮನಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸಣ್ಣ ವಿಚಾರವಾಗಿದ್ದರೆ ಆ ನೋಟಿಫಿಕೇಷನ್ ಅನ್ನು ಏಕೆ ವಿತ್‌ಡ್ರಾ ಮಾಡಿಕೊಂಡಿರಿ?

(ಗೊಂದಲ)

(ಬಿಜೆಪಿ ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು:- ಅದು ಅವರ ಅಭಿಪ್ರಾಯವಿರಬಹುದಷ್ಟೆ.

(ಗೊಂದಲ)

ಅಧ್ಯಕ್ಷರು:- ನಿಮ್ಮನಾಯಕರು ಮಾತನಾಡುತ್ತಿದ್ದಾರೆ. ಅವರೂ ಮಾತನಾಡಬಹುದು. ಒಂದು ನಿಮಿಷ ಸುಮ್ಮನಿರಿ. ಅವರು ನಾನು ಟೈಂ ಕೊಟ್ಟಿದ್ದೆ. ಅವರು ಮಾತನಾಡುವವರೆಗೆ ಸುಮ್ಮನಿರಿ.

ಶ್ರೀ ಡಿ.ಕೆ. ಶಿವಕುಮಾರ್:- ನಾವು ಕಳೆದ 15 ದಿನಗಳಿಂದ ಕಾಶಪ್ಪನವರ್ ಇಷ್ಟೂ ಬಂದಾಗ, ಯಾವ ಇಷ್ಯೂವನ್ನು ಯಾವ ರೀತಿ ತೆಗೆದುಕೊಂಡು ಯಾವ ರೀತಿ ಅಸೆಂಬ್ಲಿಯಲ್ಲಿ ಪ್ರಾರಂಭವಾಯಿತೆಂಬುದನ್ನು ನಾವು ನೋಡಿದ್ದೇವೆ. ಮತ್ತೆ, ನಿನ್ನೆ ನಡೆದ ವಿಚಾರದಲ್ಲಿ ನಿನ್ನೆ ಒಂದು ಸರ್ಕ್ಯುಲರ್ ವಿಚಾರದಲ್ಲಿ, ಕಳೆದ 20 ವರ್ಷಗಳಿಂದ ಏನು ಸರ್ಕ್ಯುಲರ್ ಇತ್ತೆಂದು, ಅದೇ ಸರ್ಕ್ಯುಲರ್ ಅನ್ನು ಸರ್ಕಾರ ಪಾಲನೆ ಮಾಡುತ್ತಿದೆ, ಯಾವುದೋ ಒಂದು ಗುಪ್ತದ ವಿಚಾರವನ್ನು ತೆಗೆದುಕೊಂಡು, ಒಂದು ದಿನ 5 ಗಂಟೆಗಳು ಇಲ್ಲಿ ಸ್ಟಾಲ್ ಮಾಡಲಿಲ್ಲವೆ? ಅವರು ಆಗ ಬಿಲ್ ಅನ್ನು ಮರೆತಿದ್ದರಾ? ಅಸೆಂಬ್ಲಿಯಲ್ಲಿ ಪ್ರೊಸೀಡಿಂಗ್ಸ್ ಅನ್ನು ಮರೆತಿದ್ದರಾ? ಆಗ ಆ ಬಿಲ್ಸ್‌ಗಳೆಲ್ಲಾ ಎಲ್ಲಿಗೆ ಹೋಗಿತ್ತು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾವು ನಿಲುವಳಿ ಸೂಚನೆ ಮೂಲಕ ತಂದಿದ್ದೇವೆ. ಕಾನೂನುಬದ್ಧವಾಗಿ ತಂದಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಅವರ ನಂತರ, ನೀವು ಮಾತನಾಡಿ.

ಶ್ರೀ ಡಿ.ಕೆ. ಶಿವಕುಮಾರ್:- ಬಹಳ ದೊಡ್ಡ ಜವಾಬ್ದಾರಿ ಹೊತ್ತ ಜನ ಫೈನಾನ್ಸ್ ಬಿಲ್ ಬಂದಾಗ ಇಡೀ ರಾಷ್ಟ್ರದಲ್ಲಿ, ಇಡೀ ನಮ್ಮ ಸಂಪ್ರದಾಯದಲ್ಲಿ, ಫೈನಾನ್ಸ್ ಬಿಲ್ ಅನ್ನು ಅಪ್ರೂವ್ ಮಾಡಿದ ಉದಾಹರಣೆಗಳಿವೆ. ಇಲ್ಲಿ ಬಾಯ್‌ಕಾಟ್ ಮಾಡಿ, ರಾಷ್ಟ್ರಕ್ಕೆ, ರಾಜ್ಯದ ಜನರಿಗೆ ದ್ರೋಹ ಮಾಡಿದ ವಿಚಾರ ಈ ಸದನದಲ್ಲಿ ನಡೆದಿದೆ. ನೀವು ಬಾಯ್‌ಕಾಟ್ ಮಾಡಿ ಹೋಗಿದ್ದೀರಿ. ಹೇಳುವುದಕ್ಕೆ ನಾಚಿಕೆ ಇಲ್ಲ. ಇಡೀ ದೇಶವನ್ನು ಲೂಟಿ ಮಾಡಿದ್ದೀರಿ. ಲೂಟಿ ಮಾಡಿ.....

(ಗೊಂದಲ)

(ಬಿಜೆಪಿ ಸದಸ್ಯರು ಸದನದ ಬಾವಿಯಲ್ಲಿ ನಿಂತು ಮಾತನಾಡುತ್ತಿದ್ದರು)

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ ಕುದುವನಹಳ್ಳಿ:- ಮಾನ್ಯ ಅಧ್ಯಕ್ಷರೆ, ಸದನವನ್ನು ನೋಡಲಿಕ್ಕೆ ಬೇರೆ ಬೇರೆ ಶಾಲೆಯ ಮಕ್ಕಳು ಬಂದಿದ್ದಾರೆ, ಅವರ ಮನಸ್ಸಿನ ಮೇಲೆ ಏನು ಪರಿಣಾಮ ಬೀರುತ್ತದೆ ಎನ್ನುವುದನ್ನು ಯೋಚಿಸಬೇಕು,...

ಅಧ್ಯಕ್ಷರು:- ಮಾನ್ಯ ಶ್ರೀನಿವಾಸಗೌಡರವರೇ, ನಾನು ನಿನ್ನೆ ಹೇಳಿದೆ, ಸಂಜೆ ಹೊತ್ತು ಟಿವಿಯಲ್ಲಿ ನೋಡಿದರೆ ನನಗೆ ಬೇಸರವಾಗುತ್ತದೆ, ಪತ್ರಿಕೆಗಳಲ್ಲಿ, ಟಿವಿಯಲ್ಲಿ ನೋಡಿದರೆ, ನಮ್ಮ ಸಭೆಯಲ್ಲಿ ಏನು ನಡವಳಿಕೆ ನಡೆಯುತ್ತಿದೆ ಅದನ್ನು ಜನ ನೋಡಿದರೆ ಏನೆನ್ನುತ್ತಾರೆ? ಮತದಾರ ಏನೆನ್ನುತ್ತಾನೆ?

ಶ್ರೀ ಜಗದೀಶ್ ಶೆಟ್ಟರ್:- ಅವರಿಗೆ ಆ ಮಾತನ್ನು ಹೇಳಿ.